ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	629
ಸದಸ್ಯರ ಹೆಸರು	:	ಶ್ರೀ ಲಹರ್ ಸಿಂಗ್ ಸಿರೋಯಾ (ವಿಧಾನಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ	:	24-09-2020
ಉತ್ತರಿಸಬೇಕಾದ ಸಚಿವರು	:	ಮಾನ್ಯ ಮುಖ್ಯಮಂತ್ರಿಯವರು

****

ಕ್ರಮ ಸಂ.	ಪ್ರಶ್ನೆ	ಉತ್ತರ
1	ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಿಂದ ಜಾರಿಯಾದ 110 ಹಳ್ಳಿಗಳಿಗೆ ಕಾವೇರಿ ನೀರನ್ನು ಒದಗಿಸುವ ಕಾಮಗಾರಿ ಯಾವ ಹಂತದಲ್ಲಿದೆ;	ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಿಂದ 110 ಹಳ್ಳಿಗಳಿಗೆ ನೀರು ಸರಬರಾಜು ಮಾಡುವ ಯೋಜನೆಯ ದರಖಾಸ್ತು ಪ್ರಕ್ರಿಯೆಯ ಮೂಲಕ ಒಟ್ಟು ರೂ.982.77 ಕೋಟಿಗಳಿಗೆ ನೀಡಲಾಗಿದ್ದು, ಸೆಪ್ಟಂಬರ್ / ಅಕ್ಟೋಬರ್ 2020 ರಲ್ಲಿ ಪೂರ್ಣಗೊಳಿಸಲು ಯೋಜಿಸಲಾಗಿದೆ. ಆಗಸ್ಟ್ 2020ರ ಅಂತ್ಯಕ್ಕೆ 2785.70 ಕಿಮೀಗಳಲ್ಲಿ 2734.73 ಕಿ.ಮೀ.ನಷ್ಟು ಭೌತಿಕ ಪ್ರಗತಿಯಾಗಿರುತ್ತದೆ. ಮುಂದುವರೆದು, ಮೇಲ್ಮಟ್ಟದ (OHT) ಹಾಗೂ ನೆಲಮಟ್ಟದ (GLR) ಜಲಸಂಗ್ರಹಗಾರದ ನಿರ್ಮಾಣದ ಕಾಮಗಾರಿಗಳನ್ನು ಮತ್ತು ಗೊಟ್ಟಿಗೆರೆಯಲ್ಲಿ 50ಎಂಎಲ್ ಸಾಮರ್ಥ್ಯದ ನೆಲಮಟ್ಟದ ಜಲಾಗಾರವನ್ನು ಕೈಗೆತ್ತಿಕೊಳ್ಳಲಾಗಿದ್ದು, ಸದರಿ ಯೋಜನೆಯು ಜುಲೈ 2021ರ ಅಂತ್ಯಕ್ಕೆ ಪೂರ್ಣಗೊಳಿಸಲು ಯೋಜಿಸಲಾಗಿದೆ.
2	ಈ ಯೋಜನೆಯಡಿ ಈವರೆವಿಗೆ ನೀರು ಸರಬರಾಜು ಮಾಡಿದ ಹಳ್ಳಿಗಳ ವಿವರ ಹಾಗೂ ನೀರಿನ ಸಂಪರ್ಕ ಪಡೆದವರೆಷ್ಟು (ಒಟ್ಟು ಸಂಖ್ಯೆಯ ವಿವರಗಳನ್ನು ನೀಡುವುದು)	ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಿಂದ 110 ಹಳ್ಳಿಗಳ ಪೈಕಿ 51 ಹಳ್ಳಿಗಳಿಗೆ (ಹಳ್ಳಿಗಳ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ) ಕುಡಿಯುವ ನೀರನ್ನು ಒದಗಿಸಲು ಅಧಿಸೂಚನೆಯನ್ನು ಹೊರಡಿಸಲಾಗಿದ್ದು, ಇಲ್ಲಿಯವರೆಗೂ ಒಟ್ಟಾರೆಯಾಗಿ 9458 ಗಳಿಗೆ ನೀರಿನ ಸಂಪರ್ಕ ನೀಡಲಾಗಿರುತ್ತದೆ. ಬೆಂಗಳೂರು ಜಲಮಂಡಳಿಯಿಂದ ಕಾವೇರಿ 5ನೇ ಹಂತದ ಕುಡಿಯುವ ನೀರಿನ ವ್ಯವಸ್ಥೆಯ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದ್ದು, ಈ ಕಾಮಗಾರಿ ಪೂರ್ಣಗೊಂಡ ನಂತರ ಇನ್ನುಳಿದ 59 ಹಳ್ಳಿಗಳಿಗೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಕಲ್ಪಿಸಲಾಗುವುದು.

ಸಂಖ್ಯೆ: ನಅಇ 104 ಎಂಎನ್ಐ 2020

ಬಿ.ಎಸ್. ಯಡಿಯೂರಪ್ಪ

(ಬಿ.ಎಸ್. ಯಡಿಯೂರಪ್ಪ)

ಮುಖ್ಯಮಂತ್ರಿ

ಅನುಬಂಧ

.ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 110 ಹಳ್ಳಿಗಳ ಪೈಕಿ 51 ಹಳ್ಳಿಗಳಿಗೆ ಅಧಿಸೂಚನೆ ಹೊರಡಿಸಿರುವ ವಿವರ

ಕ್ರ ಸಂ	ಅಧಿಸೂಚನೆ ಹೊರಡಿಸಿರುವ ಹಳ್ಳಿಗಳ ಹೆಸರು	ಕ್ರ ಸಂ	ಅಧಿಸೂಚನೆ ಹೊರಡಿಸಿರುವ ಹಳ್ಳಿಗಳ ಹೆಸರು
1	ಹೇರೊಹಳ್ಳಿ	27	ಚಿಕ್ಕಸಂದ್ರ
2	ಸೊಣ್ಣೆನಹಳ್ಳಿ	28	ಸಿಡೇದಹಳ್ಳಿ
3	ಹೊರಮಾವು (ಭಾಗಶಃ)	29	ಅಂದ್ರಹಳ್ಳಿ
4	ದಾಸರಹಳ್ಳಿ (ಭಾಗಶಃ)	30	ಕರಿಓಬನಹಳ್ಳಿ
5	ಚಲ್ಕರೆ (ಭಾಗಶಃ)	31	ಆರೇಹಳ್ಳಿ (ಭಾಗಶಃ)
6	ಕೂಡ್ಲು (ಭಾಗಶಃ)	32	ವಸಂತಪುರ (ಭಾಗಶಃ)
7	ನಾಗನಾಥಪುರ (ಭಾಗಶಃ)	33	ಗಿಡದಕೋನೇನಹಳ್ಳಿ (ಭಾಗಶಃ)
8	ಪರಪ್ಪನ ಅಗ್ರಹಾರ (ಭಾಗಶಃ)	34	ನಾಗೊಂಡನಹಳ್ಳಿ
9	ಗಾಣಕಲ್ಲು (ಭಾಗಶಃ)	35	ಕಾಳೇನ ಅಗ್ರಹಾರ
10	ತೂಬರಹಳ್ಳಿ	36	ಜುನ್ನಸಂದ್ರ
11	ಸಿದ್ದಾಪುರ (ಭಾಗಶಃ)	37	ಕಸವನಹಳ್ಳಿ
12	ಚಿಕ್ಕ ಬೆಟ್ಟಹಳ್ಳಿ (ಭಾಗಶಃ)	38	ಅಂಬಲಿಪುರ
13	ಬೇಗೂರು	39	ದೊಡ್ಡಬೆಟ್ಟಹಳ್ಳಿ
14	ಹರಳೂರು (ಭಾಗಶಃ)	40	ಉಲ್ಲಾಳು
15	ಅಬ್ಬಿಗೆರೆ	41	ಆಲಹಳ್ಳಿ
16	ಮೇಡರಹಳ್ಳಿ	42	ಅಂಜನಾಪುರ
17	ಶೆಟ್ಟಿಹಳ್ಳಿ	43	ಬೆಳ್ಳಂದೂರು
18	ಉತ್ತರಹಳ್ಳಿ (ಭಾಗಶಃ)	44	ಕೈಕೊಂಡ್ರಹಳ್ಳಿ
19	ಎಲ್ಲೇನಹಳ್ಳಿ	45	ಲಿಂಗಧೀರನಹಳ್ಳಿ ಬಿ
20	ದೊಡ್ಡಕಲ್ಲಸಂದ್ರ	46	ಹೊಸಹಳ್ಳಿ
21	ರಘುವನಹಳ್ಳಿ	47	ವಡ್ಡರಪಾಳ್ಯ (ಭಾಗಶಃ)
22	ರಾಮಗೊಂಡನಹಳ್ಳಿ	48	ಗುಬ್ಬಲಾಳು (ಭಾಗಶಃ)
23	ರಾಚೇನಹಳ್ಳಿ	49	ಚಿಕ್ಕತೋಗೂರು
24	ಗೊಲ್ಲಹಳ್ಳಿ	50	ದೊಡ್ಡತೋಗೂರು
25	ತಿಪ್ಪಸಂದ್ರ	51	ಬಸಾಪುರ
26	ಹೆಮ್ಮಿಗೆಪುರ (ಭಾಗಶಃ)		

B. P.

ಮುಖ್ಯ ಅಭಿಯಂತರರು(ತ್ಯಾನೀನಿ–110ಹ)
ಬೆಂಗಳೂರು ಜಲಮಂಡಲಿ